ಬೆಂಗಳೂರು | ಬೆಲೆ: 3ರೂ. | ಪುಟ: 8 | ಸಂಪುಟ: 36, | ಸಂಚಿಕೆ: 318 | 1 ಗುರುವಾರ, ಜನವರಿ 2026

MAG(3)/NPP/250/2023-2024

RNI NO. 58071/ 1993



ಅಜಿತ್ ಸಾಗರ್.ಎನ್.
ಪ್ರಧಾನ ಸಂಪಾದಕರು

ಡಾ. ಜಿ.ವೈ.ಪದ್ಮನಾಗರಾಜು
ವ್ಯವಸ್ಥಾಪಕ ಸಂಪಾದಕರು

# ಇಂದು ಸಂಜೆ

ನೈಜ ಸುದ್ದಿಗಳ ಸಮಗ್ರ ಚಿತ್ರಣ

**INDU SANJE,** Kannada evening daily



ವಿ.ನಾಗರಾಜು, ಸಂಸ್ಥಾಪಕರು

ಬೆಂಗಳೂರು, ಬೆಂ. ಗ್ರಾಮಾಂತರ, ಮೈಸೂರು, ಮಂಡ್ಯ, ಹಾಸನ, ಕೋಲಾರ, ಚಿಕ್ಕಬಳ್ಳಾಪುರ, ಚಾಮರಾಜನಗರ, ರಾಮನಗರ, ಹುಬ್ಬಳ್ಳಿಯಿಂದ ಏಕಕಾಲಕ್ಕೆ ಪ್ರಕಟಿತ

Bangalore, B.lore Rural, Mysore,, Mandya, Hassan, Kolar, Chikkaballapur, Chamarajnagara, Ramanagara, Hubbali Published simultaneously

REGISTERED KA/BGW- 1847/ 2023-25 RNI NO. 58071/ 1993 posted at patrika channel, RMS Bhavan Bangalore PSO, mysore Road, Bangalore - 560026 EVERYDAY

ಅಷ್ಟವಿಧಾರ್ಚನೆ ಷೋಡಶೋಪಚಾರವ ಮಾಡುವುದು, ಮಾಡಿದ ಪೂಜೆಯ ನೋಡುವುದಯ್ಯಾ ಶಿವತತ್ವಗೀತವ ಪಾಡುವುದು, ಶಿವನ ಮುಂದೆ ನಲಿದಾಡುವುದಯ್ಯಾ ಭಕ್ತಿಸಂಭಾಷಣೆಯು ಮಾಡುವುದು, ನಮ್ಮ ಕೂಡಲಸಂಗನ ಕೂಡುವುದು.

2 ಎಲ್‌ಪಿಜಿ ಸಿಲಿಂಡರ್ ಬೆಲೆ ಏರಿಕೆ

4 ಟ್ರೇಲರ್‌ನಲ್ಲೇ ಕುತೂಹಲ ಮೂಡಿಸಿದೆ "ಮಾಜರ್"






## ಶುಭಾಶಯಗಳು

ಇಂದುಸಂಜೆ ಪತ್ರಿಕೆ ಸಮಸ್ತ ಓದುಗರು, ಜಾಹೀರಾತುದಾರರು, ಪ್ರತಿನಿಧಿಗಳಿಗೆ ಹೊಸ ವರ್ಷ – 2026ರ ಹಾರ್ದಿಕ ಶುಭಾಶಯಗಳು... –ಸಂ










■ ಬೆಂಗಳೂರು ಪ್ರೆಸ್‌ಕ್ಲಬ್ ವತಿಯಿಂದ ಹೊಸ ವರ್ಷಾಚರಣೆ ಕಾರ್ಯಕ್ರಮದಲ್ಲಿ ನಿನ್ನೆ ಪ್ರೆಸ್‌ಕ್ಲಬ್ ಆವರಣದಲ್ಲಿ ಇಂದು ಸಂಜೆಯ ವ್ಯವಸ್ಥಾಪಕ ಸಂಪಾದಕರಾದ ಡಾ.ಜಿ.ವೈ.ಪದ್ಮ ನಾಗರಾಜು ಮತ್ತು ಕ್ರೈಂ ವರದಿಗಾರ ವಾಸುಮೂರ್ತಿ ಸಿ., ಅವರಿಗೆ ಪ್ರತಿಷ್ಠಿತ ಪ್ರೆಸ್‌ಕ್ಲಬ್ ಪ್ರಶಸ್ತಿಯನ್ನು ಪರಿಷತ್‌ನ ಸಭಾಪತಿ ಬಸವರಾಜ್ ಹೊರಟ್ಟಿ ಅವರು ಪ್ರದಾನ ಮಾಡಿದರು. ಈ ಸಂದರ್ಭದಲ್ಲಿ ಮುಖ್ಯಮಂತ್ರಿಗಳ ಮಾಧ್ಯಮ ಸಲಹೆಗಾರ ಕೆ.ವಿ. ಪ್ರಭಾಕರ್, ಪ್ರಧಾನ ಸಂಪಾದಕರಾದ ಎನ್.ಅಜಿತ್ ಸಾಗರ್, ಛಾಯಾಗ್ರಾಹಕ ಶರಣಬಸಪ್ಪ ಸೇರಿದಂತೆ ಹಲವರು ಉಪಸ್ಥಿತರಿದ್ದರು.

# ಆತ್ಮಸಾಕ್ಷಿಯಿಂದ ಕೆಲಸ ಮಾಡಿ: ಹೊರಟ್ಟಿ

## ಪ್ರೆಸ್‌ಕ್ಲಬ್ ಪ್ರಶಸ್ತಿ ಪ್ರದಾನ | ಸಮಾಜ ಪರಿವರ್ತನೆಗೆ ಮಾಧ್ಯಮ ಕೊಡುಗೆ ಅನನ್ಯ

■ **ಉದಯವಾಣಿ ಸಮಾಚಾರ**

**ಬೆಂಗಳೂರು:** ಪತ್ರಕರ್ತರು ಉತ್ತಮವಾದ ಕೆಲಸ ಮಾಡಬೇಕು. ನೀವು ಆತ್ಮಸಾಕ್ಷಿಯಿಂದ ಕೆಲಸ ಮಾಡಿದ್ದರೆ ಯಾರಿಗೂ ಹೆದರುವ ಅವಶ್ಯಕತೆ ಇಲ್ಲ ಎಂದು ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಹೇಳಿದರು.

ಪ್ರೆಸ್‌ಕ್ಲಬ್ ಆಫ್ ಬೆಂಗಳೂರು ವತಿಯಿಂದ ಬುಧವಾರ ಹಮ್ಮಿಕೊಂಡಿದ್ದ ವರ್ಷದ ವಿಶೇಷ ವ್ಯಕ್ತಿ ಹಾಗೂ 2025ನೇ ಸಾಲಿನ ವಾರ್ಷಿಕ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಅವರು ಮಾತನಾಡಿದರು.

ಪತ್ರಿಕಾರಂಗಾ ಪ್ರಜಾಪ್ರಭುತ್ವದ 4ನೇ ಅಂಗವಾಗಿದ್ದು, ಶಾಸಕಾಂಗ, ಕಾರ್ಯಾಂಗ, ನ್ಯಾಯಾಂಗ ತಪ್ಪು ಮಾಡಿದಾಗ ತಿದ್ದುವ ಕೆಲಸ ಮಾಡುತ್ತದೆ. ಸಮಾಜವನ್ನು ತಿದ್ದುವಲ್ಲಿ ಮತ್ತು ಪರಿವರ್ತನೆ ಮಾಡುವಲ್ಲಿ ಪತ್ರಿಕಾರಂಗ ಮಹತ್ವದ ಪಾತ್ರ ವಹಿಸುತ್ತವೆ. ಮಾಧ್ಯಮದವರು ಪ್ರಯತ್ನಪಟ್ಟರೆ ಎಲ್ಲವನ್ನು ಸರಿ ಮಾಡಬಹುದು ಎಂದರು.

ಮೊದಲು ವಿಧಾನಸಭೆ ಮತ್ತು ವಿಧಾನ ಪರಿಷತ್ತಿನ ಒಳಗೆ ಸುದ್ದಿವಾಹಿನಿಗಳಿಗೆ ಅವಕಾಶವಿರಲಿಲ್ಲ. ನಾನು ವಿಧಾನ ಪರಿಷತ್ ನಲ್ಲಿ ಸುದ್ದಿವಾಹಿನಿಗಳ ಪ್ರವೇಶ ಹಾಗೂ ಪತ್ರಕರ್ತರಿಗೆ ಬೇಕಾದ ಎಲ್ಲಾ ಅನುಕೂಲಗಳನ್ನು ಮಾಡಿ ಕೊಟ್ಟಿದ್ದೇನೆ. ಪತ್ರಕರ್ತರು ಕೇಳುವ ಪ್ರಶ್ನೆಗಳಿಗೆ ನಾವು ಮೈ ತುಂಬಾ ಕಣ್ಣಾಸಿಕೊಂಡಿರುತ್ತೇವೆ. ನಾನು ಪತ್ರಕರ್ತರ ಜೊತೆ ಅಪಾರ ಒಡನಾಟವಿಟ್ಟುಕೊಂಡಿದ್ದೇನೆ. ಅನೇಕ ಸಲಹೆಯನ್ನು ಪತ್ರಕರ್ತರಿಂದ ಪಡೆಯುತ್ತೇನೆ ಎಂದರು.

ಕೆ.ವಿ.ಪ್ರಭಾಕರ್ ಅವರನ್ನು ನಾವು ಜೂನಿಯರ್ ಸಿದ್ದರಾಮಯ್ಯ ಎಂದು ಕರೆಯುತ್ತೇವೆ. ಯಾಕೆಂದ್ರೆ, ಸಿಎಂ ಸಿದ್ದರಾಮಯ್ಯ ಅವರ ಜೊತೆ ಮಾತಾಡಲು ಮೊದಲು ಕೆ.ವಿ.ಪ್ರಭಾಕರ್ ಅವರನ್ನು ಕೇಳಬೇಕು. ಎಷ್ಟೋ ಸಲ ನಾವು ಇಕ್ಕಟ್ಟಿನಲ್ಲಿ ಸಿಕ್ಕಾಗ ಅದನ್ನು ಕೆ.ವಿ.ಪ್ರಭಾಕರ್ ಪರಿಹರಿಸಿದ್ದಾರೆ ಎಂದು ಹೇಳಿದರು.

ನಾವು ಎಷ್ಟೇ ಬೆಳೆದರೂ ಮೂಲ ವೃತ್ತಿಯನ್ನು ಮರೆಯಬಾರದು. ಪ್ರಭಾಕರ್ ಅವರು ಸಿಎಂ ಮಾಧ್ಯಮ ಸಲಹೆಗಾರರಾಗಿದ್ದರೂ ಕೂಡ ಪತ್ರಿಕಾ ರಂಗವನ್ನು ಅವರು ಮರೆತಿಲ್ಲ ಎಂದು ಶ್ಲಾಘಿಸಿದರು.

ವಿಧಾನಸಭೆ ಉಪಸಭಾಧ್ಯಕ್ಷ ರುದ್ರಪ್ಪ ಲಮಾಣಿ, ಶಾಸಕ ಷಡಕ್ಷರಿ, ಪ್ರೆಸ್ ಕ್ಲಬ್ ಅಧ್ಯಕ್ಷ ಆರ್.ಶ್ರೀಧರ್, ಪ್ರಧಾನ ಕಾರ್ಯದರ್ಶಿ ಶಿವಕುಮಾರ್ ಬೆಳ್ಳಿತಟ್ಟೆ, ಉಪಾಧ್ಯಕ್ಷ ಮೋಹನ್ ಕುಮಾರ್ ಬಿ.ಎನ್., ವಸತಿ ಸಚಿವರ ಮಾಧ್ಯಮ ಸಲಹೆಗಾರ ಲಕ್ಷ್ಮೀನಾರಾಯಣ, ಕೈಗಾರಿಕೆ ಸಚಿವರ ಮಾಧ್ಯಮ ಸಲಹೆಗಾರ ಶ್ರೀಧರ್ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.



ಕಾರ್ಯಕ್ರಮದಲ್ಲಿ ಗುರುಮೂರ್ತಿ ಸೇರಿದಂತೆ ಪತ್ರಕರ್ತರಿಗೆ ಪ್ರಶಸ್ತಿ ಪ್ರದಾನ ಮಾಡಲಾಯಿತು.

### ಉದಯವಾಣಿಯ ಗುರುಮೂರ್ತಿ ಸೇರಿ 55 ಪತ್ರಕರ್ತರಿಗೆ ಪ್ರಶಸ್ತಿ

ಉದಯವಾಣಿ ದಿನಪತ್ರಿಕೆ ಮುಖ್ಯ ವರದಿಗಾರ ಎಂ.ಎನ್.ಗುರುಮೂರ್ತಿ ಸೇರಿ 55 ಮಂದಿ ಪತ್ರಕರ್ತರಿಗೆ 2025ನೇ ಸಾಲಿನ ಪ್ರೆಸ್ ಕ್ಲಬ್ ವಾರ್ಷಿಕ ಪ್ರಶಸ್ತಿ ಪ್ರದಾನ ಮಾಡಲಾಯಿತು. ಮುಖ್ಯಮಂತ್ರಿಗಳ ಮಾಧ್ಯಮ ಸಲಹೆಗಾರ ಕೆ.ವಿ.ಪ್ರಭಾಕರ್ ಅವರಿಗೆ ವರ್ಷದ ವಿಶೇಷ ಪ್ರಶಸ್ತಿ ಪ್ರದಾನ ಮಾಡಲಾಯಿತು.







ದಿನಾಂಕ: 01-01-2026 ರಂದು ತೋಟಗಾರಿಕೆ ಇಲಾಖೆ ವತಿಯಿಂದ ಹೊಸ ವರ್ಷದ ಪ್ರಯುಕ್ತ ವಿಧಾನಸೌಧದ ಆವರಣದ ಕೈತೋಟದಲ್ಲಿರುವ ಲಾಲ್ ಬಹದ್ದೂರ್ ಶಾಸ್ತ್ರಿ ಪ್ರತಿಮೆ ಹಿಂಭಾಗ ಕರ್ನಾಟಕ ವಿಧಾನ ಪರಿಷತ್ತಿನ ಮಾನ್ಯ ಸಭಾಪತಿಯವರಾದ ಶ್ರೀ ಬಸವರಾಜ ಎಸ್ ಹೊರಟ್ಟಿ ಅವರು ಸಸಿಯನ್ನು ನೆಟ್ಟು ಹೊಸ ವರ್ಷದ ಶುಭಾಶಯವನ್ನು ತಿಳಿಸಿದರು.

ಈ ಸಂಧರ್ಭದಲ್ಲಿ, ವಿಧಾನ ಪರಿಷತ್ ಶಾಸಕರಾದ ರಮೇಶ್ ಬಾಬು, ವಿಧಾನ ಪರಿಷತ್ ಕಾರ್ಯದರ್ಶಿ ಮಹಾಲಕ್ಷ್ಮಿ ಸೇರಿದಂತೆ ಅಧಿಕಾರಿ ನೌಕರರುಗಳು ಉಪಸ್ಥಿತರಿದ್ದರು.